ಹಾಕುತ್ತಿದ್ದಾರೆ. ಅದರೆ ಎಲ್ಲರಿಗೂ ಆ ಬೆಳೆ ವಿಮೆ ಸಿಗುವ ಹಾಗೆ ಮಾಡಿ ಎಂದು ನಾವು ಕೇಳಿದೆವು. ನೀವೇ ಹೇಳಿರುವುದು ನಿರುದ್ಯೋಗಿ ಯುವಕರಿಗೆ 500 ರೂ. ಭತ್ಯೆ ಕೊಡುತ್ತೇವೆಂದು ಈಗಲೂ ನೀವು ಜಾಯಿಂಟ್ ಆಗಿ ನಿಮ್ಮಕಾಮನ್ ಮಿನಿಮಮ್ ಪ್ರೋಗ್ರಾಮ್‌ನಲ್ಲಿ ಸೇರಿದೆ. ಅದನ್ನು ಮಾಡುವುದಕ್ಕೂ ರೆಡಿ ಇಲ್ಲ. ಬೋರ್‌ವೆಲ್‌ಗಳಿಗೆ ಮಾರ್ಚ್‌ವರೆಗಾದರೂ ಉಚಿತ ವಿದ್ಯುತ್ ಕೊಡಿ ಎಂದು ಹೇಳಿದೆವು. ಅದಕ್ಕೂ ನೀವು ಸ್ಪಷ್ಟವಾದ ಉತ್ತರವನ್ನು ಕೊಡುತ್ತಿಲ್ಲ. ನಮಗೆ ಯಾವುದೇ ಸಮರ್ಪಕವಾದ ಉತ್ತರ ಕೊಡಲಿಲ್ಲ. ನಮಗೆ ಸಮಾಧಾನ ಇಲ್ಲ. ಅದಕ್ಕೆ ನಾವು ಅನಿವಾರ್ಯವಾಗಿ ವಾಕ್‌ಔಟ್ ಮಾಡಿ ನಾವು ಹೊರಗಡೆ ಹೋಗುತ್ತೇವೆ. ನೀವು ಏನಾದರೂ ಮಾಡಿಕೊಳ್ಳಿ.

(ಈ ಹಂತದಲ್ಲಿ ವಿರೋಧ ಪಕ್ಷದವರಾದ ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "2005ರ ಜನವರಿ 20 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿ ಮಾಡಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು, ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುವುದು".

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಅಧ್ಯಕ್ಷರು : ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗುವುದು.

4. ಖಾಸಗಿ ಸದಸ್ಯರ ನಿರ್ಣಯ

ಅಧ್ಯಕ್ಷರು : ಮಾನ್ಯ ಕೆ.ಆರ್. ರಮೇಶ್‌ಕುಮಾರ್ ಅವರು ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ದಿನಾಂಕ: 23–07–2004 ರಂದು ಮಂಡಿಸಿದ ಕೆಳಕಂಡ ನಿರ್ಣಯದ ಮೇಲೆ ಚರ್ಚೆ.

"ಇಡೀ ರಾಜ್ಯಾದ್ಯಂತ ಯಾವುದೇ ವರ್ಗದ, ಮತದ, ಧರ್ಮದ ಜನ ವಿವಾಹ ಕಾರ್ಯಕ್ರಮಗಳನ್ನು ಕುಟುಂಬಗಳಿಗೆ ಸೀಮಿತಗೊಳಿಸುವ ಮೂಲಕ ವ್ಯಾಪಾರೀಕರಣವನ್ನು ವೈಭವೀಕರಣವನ್ನು ನಿಲ್ಲಿಸುವ ದೃಷ್ಟಿಯಿಂದ ಈ ಸದನವು ಒಂದು ಹೊಸ ಶಾಸನವನ್ನು ರಚಿಸಲು ನಿರ್ಣಯಿಸುತ್ತದೆ".

ಈಗ ವಾಟಾಳ್ ನಾಗರಾಜ್‌ರವರು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಊಟಕ್ಕೆ ಹೋಗಿ ಬಂದಮೇಲೆ ಶುರು ಮಾಡಿ ಸಾರ್.

ಅಧ್ಯಕ್ಷರು : ಈಗ ಊಟ ಆದಮೇಲೆ ತೆಗೆದುಕೊಳ್ಳೋಣವಾ ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ. ಊಟ ಆದಮೇಲೆ ತೆಗೆದು ಕೊಳ್ಳುತ್ತೇನೆ. ಒಂದು, ನನಗೆ ತಾವು ಭಾಷಣಕ್ಕೆ ಅವಕಾಶ ಕೊಡಲಿಲ್ಲ. ಅಲ್ಲಿ ಧರಣಿ ಮಾಡಿದಾಗ ಮಾತನಾಡಿರತಕ್ಕ ಮಾತುಗಳನ್ನೆಲ್ಲಾ ಕಡತದಿಂದ ತೆಗೆಯಿರಿ ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ.

ಅಧ್ಯಕ್ಷರು : ವೆಲ್‌ನಲ್ಲಿ ಕುಳಿತುಕೊಂಡು ಮಾತನಾಡಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡಿದ ಉದ್ದೇಶ ಇಲ್ಲಿ ಮುಕ್ತ ವಾತಾವರಣಕ್ಕೆ ಎಲ್ಲೋ ಒಂದು ಕಡೆ ಬೂದಿಮುಚ್ಚಿದ ಕೆಂಡ ಆದಹಾಗೆ ಆಗಿದೆ. ಎಲ್ಲೋ ಒಂದು ಕಡೆ ನಮ್ಮ

ಮಾತನ್ನು ಹೇಳುವುದಕ್ಕೆ ಇಲ್ಲಿ ನಮಗೆ ರಕ್ಷಣೆ ಸಿಗುತ್ತಿಲ್ಲ. ಮತ್ತು ಬಹಳ ಮುಕ್ತವಾದ ಚರ್ಚೆಗೆ ಈ ಸದನ ಇರುವುದು. ಆ ಮುಕ್ತ ಚರ್ಚೆಗೆ ಅವಕಾಶ ಸಿಕ್ಕಿಲ್ಲ. ಎಲ್ಲೋ ಒಂದು ಕಡೆ ದ್ವೇಷ, ಆತುರದಿಂದ ಮಾತನಾಡಬೇಕು. ಇಂಥವರು ಮಾತನಾಡಬೇಕೆಂಬ ಭಾವನೆ ಇಲ್ಲೋ ಒಂದು ಕಡೆ ನಿರ್ಮಾಣವಾಗುತ್ತಿದೆ. ನಾನು ಈ ಸದನದಲ್ಲಿ 1967ರಿಂದ ಸದಸ್ಯನಾಗಿದ್ದೇನೆ. ನನ್ನ ಜೀವನದಲ್ಲಿ, ಇದು ಪ್ರಪ್ರಥಮವಾಗಿ ಆಗಿರುವಂಥಾದ್ದು. 1967ರಿಂದ ಇಲ್ಲಿಯವರೆಗೆ ಅಂದರೆ 38 ವರ್ಷಗಳ ಕಾಲ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ಇಂತಹ ಪದಗಳನ್ನು ಬಳಸಬಾರದು. ಇಲ್ಲಿ ತಾವು ಮಾತನಾಡುವುದಕ್ಕೆ ಬಹಳಷ್ಟು ಅವಕಾಶಗಳು ಇತ್ತು. ನಿನ್ನೆ ದಿವಸ ಹೊರಗಡೆ ಹೋದ ಮೇಲೆ ಮಧ್ಯಾಹ್ನ 4 ಗಂಟೆಯವರೆಗೂ ಬರಲಿಲ್ಲ. ನೀವು ಸದನದೊಳಗೆ ಬಂದಮೇಲೆ ಅಧ್ಯಕ್ಷ ಪೀಠದಲ್ಲಿದ್ದವರು, ತಮ್ಮನ್ನು ವಿನಂತಿ ಮಾಡಿಕೊಂಡರೂ, ನೀವು ಮಾತನಾಡಲಿಲ್ಲ. ಅದುದರಿಂದ ಇಲ್ಲಿ ನೀವು ಹೇಳಿದ ರೀತಿಯಲ್ಲೇ, ನೀವು ಹೇಳಿದ ಘಳಿಗೆಯಲ್ಲೇ, ಎಲ್ಲವೂ ನಡೆಯಬೇಕೆಂಬ ಏನು ಭಾವನೆ ಇದೆ, ಆ ಭಾವನೆ ಸರಿಯಲ್ಲ. ತಾವು ಆ ರೀತಿ ಇಟ್ಟುಕೊಂಡು ಇಲ್ಲಿ ಸದನಕ್ಕೆ, ಈ ಸದನದ ನಿಯಮಗಳಿಗೆ ಯಾರೂ ದೊಡ್ಡವರಲ್ಲ. ಇಲ್ಲಿ ಸದನದ ನಿಯಮಗಳಂತೆ ಎಲ್ಲವೂ ನಡೆಯಬೇಕಾಗುತ್ತದೆ. ಅದನ್ನು ತಾವು ಹಿರಿಯ ಸದಸ್ಯರು, ಈ ರೀತಿಯಾಗಿ ಮಾತನಾಡತಕ್ಕಂಥಾದ್ದು ಸರಿಯಲ್ಲವೆಂದು, ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ನಮಗೆ ರಕ್ಷಣೆಯನ್ನು ಕೊಡಬೇಕು. "ಹರ ಕೊಲ್ಲಲ್ ಪರ ಕಾಯ್ವನೆ." x x x x x.*

Sri Mallikarjuna Kharge : I take objection, ತಾವು ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರ ಮೇಲೆ ಆ ರೀತಿಯಾಗಿ ಅಪಾದನೆಯನ್ನು ಮಾಡಿದರೆ, ಇದು ಸರಿಯಲ್ಲ. ಅವರು ನನಗೆ ಅವಕಾಶವನ್ನು ಕೊಡಬಹುದಾಗಿತ್ತು. ಎಂದು ಹೇಳಿ ಅವರು ಕೇಳಿಕೊಳ್ಳಬೇಕು, ರಿಕ್ವೆಷ್ಟ್ ಮಾಡಿಕೊಳ್ಳಬೇಕು. ಅದನ್ನು ಬಿಟ್ಟು ನೀವೇ ನನ್ನ ಹಕ್ಕನ್ನು ದಮನ ಮಾಡುತ್ತಿದ್ದೀರಿ. ನೀವೇ ತುಳಿಯುತ್ತಿದ್ದೀರಿ, ಎಂದರೆ Directly he is casting aspersions on Speaker. ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇದನ್ನು expunge ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಯಾವ ಯಾವ ಪದವನ್ನು ತೆಗೆಯಬೇಕೋ ನಿಮಗೆ ಅಧಿಕಾರ ಇದೆ. ಅದನ್ನು ತೆಗೆಯಿರಿ, ಅದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದು ಪತ್ರಿಕೆಗಳಿಗೂ ಹೋಗುವ ಆಗಿಲ್ಲ, ಪ್ರೊಸೀಡಿಂಗ್ಸ್‌ನಲ್ಲೂ ಹೋಗುವ ಹಾಗೆ ಇಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಬಹಳ ಹಿರಿಯ ಸದಸ್ಯರು, ಇಲ್ಲಿ ಬಹಳ ವರ್ಷಗಳಿಂದ ಇದ್ದೆನೆಂಬ ಮಾತನ್ನು ಹೇಳಿದ್ದೀರಿ. ಆದರೆ ತಮ್ಮ ಹಿರಿತನಕ್ಕೆ ತಕ್ಕಂತೆ ತಾವು ಮಾತನಾಡುತ್ತಿಲ್ಲವೆಂಬ ಮಾತನ್ನೂ ಹೇಳಲಿಚ್ಚಿಸುತ್ತೇನೆ.

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇವತ್ತು ನಾನು ದಾರಿ ಬಿಟ್ಟು ಏನೂ ಮಾತನಾಡುತ್ತಿಲ್ಲ. ನಾನು ತಮಗೆ ಪ್ರಮಾಣಿಕವಾಗಿ ಹೇಳುತ್ತಿದ್ದೇನೆ. ಈ ಸದನದಲ್ಲಿ, ಇವತ್ತು ಮುಕ್ತವಾಗಿ ಚರ್ಚೆ ಮಾಡುವಂತಹ..

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಖಾಸಗಿ ನಿರ್ಣಯವನ್ನು ಏನು ತೆಗೆದುಕೊಂಡಿದ್ದೀರಿ, ಅದರ ಬಗ್ಗೆ ಮಾತನಾಡಿ. ಉಳಿದ ವಿಚಾರಗಳು ಏಕೆ ? ಈ ರೀತಿಯಾಗಿ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಪ್ರಯೋಜನವಾಗದೇ ಇರಬಹುದು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯಮಾಡಿ, ತಾವು ನಿನ್ನೆ ದಿವಸ ಸದನದಿಂದ ಹೊರಟು ಹೋದಿರಿ, ಸದನಕ್ಕೆ ಬರಲಿಲ್ಲ. ಆನಂತರ ಸದನಕ್ಕೆ ತಾವು ಬಂದಮೇಲೆ ಪೀಠದಲ್ಲಿದ್ದಂಥವರು ತಮ್ಮನ್ನು ಮಾತನಾಡಿಯೆಂದು ಕೇಳಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ತಾವು ದಯಮಾಡಿ ಕೇಳಬೇಕು.

ಅಧ್ಯಕ್ಷರು : ಮಾನ್ಯ ಅರಗಜ್ಞಾನೇಂದ್ರರವರು, ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಆಯಿತು, ನಿನ್ನೆ ದಿವಸ ಚರ್ಚೆ ಮುಕ್ತಾಯವಾಗಿದೆ. ಆದುದರಿಂದ ಹಿರಿಯ ಸದಸ್ಯರಾದವರು, ಆಯಾಯ ಸನ್ನಿವೇಶಗಳನ್ನು ಅರ್ಥ ಮಾಡಿಕೊಂಡು ಸಹಕರಿಸಬೇಕೇ, ಹೊರತು, ಈ ರೀತಿಯಾಗಿ ಮಾತನಾಡತಕ್ಕಂಥಾದ್ದು, ಸರಿಯಲ್ಲ. ಇದು ಈ ಸದನಕ್ಕೆ ಗೌರವ ಬರುವುದಿಲ್ಲ, ಬಿಡಿ. ನಿಮ್ಮ ಅನುಭವದ ಜೊತೆ ನಾನು ಸಣ್ಣವನು. ಆದರೆ ಈ ಸದನಕ್ಕೆ ನಿಮ್ಮ ಮಾತಿನಿಂದ ಗೌರವ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಅಗೌರವ ಮಾಡಬೇಕೆಂದು ಇಲ್ಲ. ರಾಜ್ಯದ ಜನತೆ ನೋಡಲಿ, ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಇರುವಂಥಾದ್ದು, ಐದು ಕೋಟಿ ಕನ್ನಡ ಜನತೆ ನೋಡಲಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಖಾಸಗಿ ಸದಸ್ಯರುಗಳ ನಿರ್ಣಯದ ಮೇಲೆ ಮಾತನಾಡುವುದಕ್ಕೆ ತಮ್ಮನ್ನು ಕರೆದಿದ್ದೇನೆ. ತಾವು ದಯಮಾಡಿ ಇದರ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಅದರ ಬಗ್ಗೆ ಜನ ನೋಡಲಿ, ತೀರ್ಮಾನ ಮಾಡಲಿ, ನನ್ನದು ಎನೂ ಅಭ್ಯಂತರವಿಲ್ಲ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಪ್ರಜಾತಂತ್ರ ದೇಗುಲದಲ್ಲಿ, ಆ ಪೀಠದ ಮೇಲೆ ಇರುವಂತಹ ತಕ್ಕಡಿಯನ್ನು ಏತಕ್ಕೆ ಮಾಡಿದ್ದುಗೊತ್ತೇನು ? ಅದು ವ್ಯತ್ಯಾಸ ಆಗಬಾರದೆಂದು ಹೇಳಿ.

ಅಧ್ಯಕ್ಷರು : ಅದು ಎಲ್ಲರನ್ನೂ ಸಮನಾಗಿ ಕಾಣಬೇಕೆಂದು, ಕೆಲವರನ್ನು ವಿಶೇಷವಾಗಿ ಕಾಣಬೇಕೆಂದು ಅಲ್ಲ. ಆ ತಕ್ಕಡಿ ಅರ್ಥ ಹೇಳುವಂಥಾದ್ದು. ಅದರೆ ಇಲ್ಲಿ ಏನಾಗಿದೆಯೆಂದರೆ, ಕೆಲವರಿಗೆ ನಮ್ಮನ್ನು ವಿಶೇಷವಾಗಿ ಕಾಣಬೇಕೆಂಬ ಭಾವನೆ ಇದೆ. ಅಂಥ ಭಾವನೆಯನ್ನು ಯಾರಾದರೂ ಇಟ್ಟುಕೊಂಡಿದ್ದರೆ, ಅದನ್ನು ತಲೆಯಿಂದ ತೆಗೆದುಹಾಕಿ ಬಿಡಬೇಕೆಂದು ನಾನು ಪ್ರರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನ್ನ ತಲೆಯಲ್ಲಿ ಅಂತಹ ಉದ್ದೇಶಗಳೇ ಇಲ್ಲ. "ನಾ ನಿನ್ನ ಧ್ಯಾನದೊಳಿರಲು, ಹೀನ ಮಾನವರು ಏನು ಮಾಡಬಲ್ಲರೊ, ರಂಗಾ, ಮತ್ಸರಿಸುವ ಜನ, ಒಟ್ಟುಗೂಡಿದರೆನೊ" ಎಂಬ ಪುರಂದರ ದಾಸರ ಒಂದು ವಚನ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಖಾಸಗಿ ಸದಸ್ಯರುಗಳ ನಿರ್ಣಯದ ಮೇಲೆ ಮಾತನಾಡಬೇಕೆಂದು ಹೇಳಿದ್ದೇನೆ. ಅದರ ಮೇಲೆ ಮಾತನಾಡಿ. ಈಗ ಮಾನ್ಯ ಕೆ.ಆರ್. ರಮೇಶ್ ಕುಮಾರ್‌ರವರು ಮತ್ತು ನೀವು ಸಲ್ಲಿಸಿರುವಂತಹ ಖಾಸಗಿ ನಿರ್ಣಯವಿದೆ. ಅದರ ಮೇಲೆ ಮಾತನಾಡಿ ಎಂದು ಹೇಳುತ್ತಿದ್ದೇನೆ. ತಾವು ಅದರ ಮೇಲೆ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಊಟಕ್ಕೆ ಸಭೆಯನ್ನು ಅಡ್ಜೆರ್ನ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎಷ್ಟು ಹೊತ್ತು ಕುಳಿತು ಕೊಳ್ಳೋಣ ಹೇಳಿ. ನನಗೆ ಊಟ ಮಾಡಿಕೊಂಡು ಬಂದಮೇಲೆ ಅವಕಾಶವನ್ನು ಕೊಡಬೇಕಲ್ಲಾ ? ಪ್ರತಿ ದಿವಸ 1.30 ಗಂಟೆಗೆ ಊಟಕ್ಕೆ ಏಳುತ್ತಿದ್ದೀರಿ. ಈಗ 2.15 ಗಂಟೆಯಾದರೂ ಎದ್ದಿಲ್ಲ. ನಾನು ಎಷ್ಟು ಹೊತ್ತು ಮಾತನಾಡಲಿ, ಹೇಳಿ. ನಾನು ಇದರ ಬಗ್ಗೆ ಸಮಗ್ರವಾಗಿ ಮಾತನಾಡಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಊಟಕ್ಕೆ ಕರೆದಿದ್ದಾರೆ, ಈಗ ಲಂಚ್ ಬ್ರೆಕ್ ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಊಟಕ್ಕೆ ಕರೆದಿದ್ದಾರೆ, ಮತ್ತೆ ಎಲ್ಲರ ಹೊಟ್ಟೆಯೂ ಹಸಿದಿದೆ. ಈಗ ತಾವು ಪುರಂದರ ದಾಸರ ವಚನವನ್ನು ಹೇಳಿದರೆ ಏನೂ ಆಗುವುದಿಲ್ಲ. ಆದುದರಿಂದ ಮತ್ತೊಂದು ಅವಕಾಶವನ್ನು ಯಾವಾಗಲಾದರೂ ಕೊಡಬಹುದು. ಈಗ ಸದನವನ್ನು ಮುಗಿಸಿ ಬಿಡಬಹುದು. ಈಗ ಬೇರೆ ಯಾವ ಸಬ್ಜೆಕ್ಟ್ ಇಲ್ಲ. ಅದುದರಿಂದ ಇನ್ನೊಂದು ಅವಕಾಶದಲ್ಲಿ ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇನ್ನೊಂದು ಅವಕಾಶದಲ್ಲಿ ಪುರಂದರ ದಾಸರದ್ದು ತೆಗೆದುಕೊಳ್ಳುವಿರಿ, ಆಗಬಹುದು.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಏನು ?

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ಸಭೆಯನ್ನು ಅಡ್ಜೆರ್ನ್ ಮಾಡಿದ್ದಿರೋ, ಅಥವಾ ಕುಳಿತುಕೊಳ್ಳೋಣವಾ ?

ಅಧ್ಯಕ್ಷರು : ಸಭೆಯನ್ನು ಅಡ್ಜೆರ್ನ್ ಮಾಡುತ್ತಿದ್ದೇನೆ. ಇನ್ನೊಂದು ಅವಕಾಶಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಸಿದ್ಧ ನಾಗಿದ್ದೇನೆ. ತಾವು ಆನಂತರ ತೆಗೆದುಕೊಳ್ಳುವುದಾರೆ ತೆಗೆದುಕೊಳ್ಳಿ.

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟಿತ ಕಾಲದವರೆಗೆ ಮುಂದೂಡಲಾಗಿದೆ.

(ಸಭೆಯು ತನ್ನ ಕಾರ್ಯಕಲಾಪವನ್ನು ಮುಗಿಸಿ ಮಧ್ಯಾಹ್ನ 2.15 ಗಂಟೆಗೆ ಅನಿರ್ದಿಷ್ಟಿತ ಕಾಲದ ವರೆಗೆ ಮುಂದೂಡಲ್ಪಟ್ಟಿತು.)